ಮಂತ್ರದಂಡವಿದೆ? ಕ್ರಿಮಿನಾಶಕ ಹಾಗಿರಲಿ, ದಿನನಿತ್ಯ ಉಪಯೋಗಿಸುವ ಅರಿಸಿನ ಕೂಡಾ ಇಲ್ಲ. ಮತ್ತೊಂದು ಮೂಲೆ ಸೇರಿ ಮಗುವನ್ನು ಮಡಿಲಲ್ಲಿ ಮಲಗಿಸಿಕೊಂಡೇ ರಾತ್ರಿ ಕಳೆದಿದ್ದರು ದಂಪತಿ. ಬೆಳಗ್ಗೆ ಇರುವೆಗೂಡಿಗೆ ಕುದಿನೀರು ಹುಯ್ದು, 'ಇವತ್ತು ಏನಾಗಲಿಕ್ಕಿಲ್ಲ' ಎನ್ನುವ ಕುರುಡು ನಂಬುಗೆ. ಅವತ್ತು ರಾತ್ರಿ ಇರುವೆಗಳು ಕಾಡಿಸದಿದ್ದರೂ, ಹೊರಗಿನ ಸದ್ದುಗಳು ಕ್ರಮೇಣ ಅಭ್ಯಸ್ಥವಾಗಿದ್ದರೂ, ಒಂದು ಹೊತ್ತಿನಲ್ಲಿ ಎಚ್ಚೆತ್ತ ನರ್ಮದಾ ಮಗನನ್ನು ಬಳಸಿದರೆ ಮಗುವಿನ ಮೈ ಬಿಸಿಯಾಗಿದೆ. ಹೌಹಾರಿತ್ತು ಜೀವ.

"ಎದ್ದೇಳ್ರೀ, ದೀಪ ಹಚ್ಚಿ..."

"ಏನಾಯ್ತೇ?"

"ನೋಡಿ, ಮಗೂಗೆ ಜ್ವರ ಬಂದಿರೋ ಹಾಗಿದೆ."

ಲ್ಯಾಂಪು ಬೆಳಗಿಸಿದ ರಾಜೀವ ಮಗುವಿನ ಹಣೆ ಮುಟ್ಟಿ ಖಾತರಿಪಡಿಸಿಕೊಂಡಿದ್ದ. 'ಮಗುವಿಗೆ ಜ್ವರ ಬಂದಿದೆ' ಅನ್ನುವ ಸುದ್ದಿ ಹರಡಿದರೆ ನಾನಾರ್ಥಗಳು ಬಿಚ್ಚಿಕೊಳ್ಳುತ್ತವೆ. ಈಗ ಜ್ವರ ಅಂದರೆ ಬರೀ ಜ್ವರ ಅಲ್ಲ, ಶೀತ ಅಂದರೆ ಬರೀ ಶೀತವಲ್ಲ. ಎಲ್ಲಾ ಜೊಡಣೆಯಾಗಿರುವುದು ಮೆಟ್ಟಿ ಮುರಿಯುತ್ತಿರುವ ಕಾಯಿಲೆಯೊಂದಿಗೆ. ಏನು ಮಾಡಬೇಕು? ಯಾರಿಗೆ ತಿಳಿಸಬೇಕು? ಚಾರ್ಜ್ ಮಾಡಿಕೊಳ್ಳುವ ವ್ಯವಸ್ಥೆಯಿಲ್ಲದೆ ಮಕ್ಕಳ ಆಟದ ಸಾಮಾನಿನ ಹಾಗಾಗಿದೆ ಮೊಬೈಲು. ಮನೆಯವರನ್ನು ಸಂಪರ್ಕಿಸುವ ಯಾವ ಮಾರ್ಗವೂ ಕಾಣಿಸುತ್ತಿಲ್ಲ, ಸ್ವತಃ ಹೋಗಿಬರುವುದೊಂದನ್ನು ಬಿಟ್ಟರೆ. ಆದರೆ, ಯಾರೊಡನೆಯೂ ಸಂಪರ್ಕ ಬೆಳೆಸಬಾರದೆನ್ನುತ್ತದೆ ಕಟ್ಟುಪಾಡು. ನಾವೇನು ಮನುಷ್ಯರಾ ಅಥವಾ ಮೃಗಗಳಾ? ಪಕ್ಕದಲ್ಲಿ ಕೂತಿದ್ದ ನರ್ಮದಾ ಅಕ್ಷರಶಃ ಕಂಪಿಸುತ್ತಿದ್ದಾಳೆ.

"ಕೊರೊನಾ ಗಿರೊನಾ ಇರ್ಲಿಕ್ಕಿಲ್ಲ, ಅಲ್ವೇನ್ರೀ?" ಎನ್ನುವಾಗ ಅವಳ ದನಿಯ ನಡುಕ ಇವನ ಮೈಯಲ್ಲೂ ಹೊಕ್ಕು ಭೀತಿಯ ಅಲೆಗಳನ್ನೆಬ್ಬಿಸಿತು. ಯಾರೂ ಹೇಳಕೇಳುವವರಿಲ್ಲದೆ ತಬ್ಬಲಿಗಳಂತೆ ಇಲ್ಲೇ ಅಂತ್ಯವಾಗಿಬಿಡುತ್ತೇವೆಯಾ? ಮೂರು ದಿನಗಳ ಹಿಂದೆ ಬಾಡಿಗೆ ವಾಹನದಲ್ಲಿ ಬಂದಿದ್ದು ಕಂದನಿಗೆ ಮುಳುವಾಯಿತಾ? ವಾಹನದೊಳಗೆ ಕ್ರಿಮಿನಾಶಕ ಸಿಂಪಡಿಸಿ ಸೂಕ್ತ ಮುನ್ನೆಚ್ಚರಿಕೆ ವಹಿಸಿದ್ದೇನೆಂದು ಡ್ರೈವರ್ ಹೇಳಿದ್ದ. ಅವನು ಹೇಳಿದ್ದು, ಇವರು ನಂಬಿದ್ದು. ಅವನಿಗೂ ಅಪರಿಚಿತರ ಕುರಿತು ಸಂದೇಹ ಇದ್ದೇ ಇರುತ್ತದೆಯಲ್ಲವೇ? ಅವನ್ಯಾಕೆ ಸುಳ್ಳು ಹೇಳುತ್ತಾನೆ? ಮಗುವನ್ನು ಡಾಕ್ಟರ ಹತ್ತಿರ ಕರೆದುಕೊಂಡು ಹೋಗಬೇಕೆಂದರೂ ಅಣ್ಣನ ಮುಂದೆ ಕೈಯೊಡ್ಡಿ ನಿಲ್ಲಬೇಕು. ಕೇಳುವ ಹಕ್ಕಿದೆ. ಕೇಳುವುದರಲ್ಲಿ ತಪ್ಪಿಲ್ಲ. ಆದರೆ, ಕೊಡುವವರ ಆಂತರ್ಯ ಏನಿರುತ್ತದೆಯೋ? ದುಡ್ಡಿನ ವ್ಯವಸ್ಥೆ ಮಾಡಿಕೊಂಡರೂ ಆಸ್ಪತ್ರೆಗೆ ಹೋಗುವ ಬಗೆ ಹೇಗೆ? ಯಾರು ಕರೆದುಕೊಂಡು ಹೋಗುತ್ತಾರೆ? ಝಲ್ಲನೆ ಬೆವರಿ ಹೋದ ರಾಜೀವ. ಖಾಸಗಿ ಆಸ್ಪತ್ರೆಗಳಲ್ಲಿ ಕೊರೊನಾ ಅಂದರೆ ಲಕ್ಷಲಕ್ಷಗಳ ಖರ್ಚು. ಹೆತ್ತವರಿಂದ ಮಕ್ಕಳನ್ನು ಬೇರ್ಪಡಿಸಿ ಚಿಕಿತ್ಸೆ. ತಮಗೂ ಅಮರಿಕೊಂಡಿದ್ದರೆ? ಸರ್ಕಾರಿ ಆಸ್ಪತ್ರೆಯೇ ಇರಲಿ, 'ಬೆಡ್ ಖಾಲಿ ಇಲ್ಲ' ಎಂದು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹತ್ತಾರು ಆಸ್ಪತ್ರೆಗಳಿಗೆ ಅಲೆದಾಡಿಸಿದ ನಾನಾ ಕತೆಗಳನ್ನು ದೂರದರ್ಶನ ಕಣ್ಣೆದುರು ತೆರೆದಿಟ್ಟಿದೆ. ದೊಡ್ಡ ಸಿಟಿಗಳಲ್ಲೇ ಹೀಗಾದರೆ ಹಳ್ಳಿಗಳ ಕತೆಯೇನು? 'ಹಳ್ಳಿಗಳ ಕಡೆ ಸುಳಿಯಬೇಡಿ' ಎಂದು ಇದಕ್ಕೇ ಹೇಳುತ್ತಿರುವುದಾ ಹಳ್ಳಿ ಮಂದಿ? ತಪ್ಪೇನಲ್ಲ...

"ಏನು ಮಾಡೋದ್ರೀ?" ಕೇಳುತ್ತಿದ್ದಾಳೆ ಹೆಂಡತಿ.

"ಏನಾಗಲ್ಲ ಸುಮ್ನಿರು. ನಿನ್ನೆ ಮಳೆ ಬಂದಿರ್ಲಿಲ್ವೇನೇ? ಥಂಡಿ ಗಾಳಿ ಬೀಸ್ತಿತ್ತು. ಅದಕ್ಕೇ ಬಂದಿರ್ಬೇಕು ಜ್ವರ..."

ಕರವಸ್ತ್ರ ಒದ್ದೆ ಮಾಡಿ ಹಣೆಯ ಮೇಲಿರಿಸುತ್ತಾ ರಾತ್ರಿ ಕಳೆದರು ದಂಪತಿ. ಏನು ಮಾಡಬೇಕೆಂದು